


# ಸಾಧನೆಯ ಬೆನ್ನೇರಿ!

ಅದೊಂದು ಅದ್ಭುತವಾದ ವಾತಾವರಣ! ಯಾವುದೋ ವಿದೇಶದಲ್ಲಿರುವ ಕಂಪನಿಯೊಂದರಲ್ಲಿ ಕುಳಿತ ಭಾವ! ಪ್ರಸ್ತುತ ಯಾವುದೇ ಬೃಹತ್ ಸಾಫ್ಟ್‌ವೇರ್ ಕಂಪನಿಗಳಿಗೂ ಕಡಿಮೆ ಏನಿಲ್ಲವೆನ್ನುವಂತಹ ಕಟ್ಟಡದ ಒಳ ವಿನ್ಯಾಸ, ಇಷ್ಟೆಲ್ಲಾ ನೋಡುತ್ತಾ ಸ್ವಾಗತ ಕಛೇರಿಯಲ್ಲಿ ಕುಳಿತಿದ್ದ ನನಗೆ ಕಛೇರಿಯ ಸ್ವಾಗತಕಿಯೊಬ್ಬರು ಬಂದು "ಸರ್ ಕರಿತಾ ಇದ್ದಾರೆ" ಎಂದರು. ಹಾಗೇ ಅವರನ್ನೇ ಹಿಂಬಾಲಿಸುತ್ತಾ ಹೋದ ನನಗೆ ಎದುರಾಗಿದ್ದು ಒಂದು ದೊಡ್ಡ ಚರ್ಚಾ ಕೋಣೆ! ಆಗ ಅಲ್ಲಿ ಮಾತಿಗೆ ಸಿಕ್ಕವರೇ, ಸಾಫ್ಟ್‌ವೆಂಟ್ ಸರ್ವಿಸಸ್ ಎಂಬ ಅದ್ಭುತವಾದ ತಂತ್ರಜ್ಞಾನ ಕಂಪನಿಯೊಂದರ ನಿರ್ದೇಶಕರಲ್ಲೊಬ್ಬರಾದ ಶ್ರೀ ಕುಮಾರ್.ಎಂ ರವರು. ಸಾಫ್ಟವೇರ್ ಕಂಪನಿಯೆಂದರೇ ಏನು? ಅದರ ಒಳ ಜಗತ್ತಿನ ವಿಸ್ತಾರವೇನು? ಒಬ್ಬ ಸಾಫ್ಟವೇರ್ ಎಂಜಿನಿಯರ್ ಆದವನ ಮನಸ್ಥಿತಿ ಏನು? ಎಂಬೆಲ್ಲಾ ನನ್ನೊಳಗಿನ ಪ್ರಶ್ನೆಗಳಿಗೆ ಚಾಚು ತಪ್ಪದೇ ಉತ್ತರಗಳನ್ನು ನೀಡಲೆಂದೇ ಕಾದು ಕುಳಿತವರಂತೆ ಕಂಡರು ಕುಮಾರ್. ಬಹುಶಃ ಅವರ ಜಾಗದಲ್ಲಿ ಬೇರೆ ಯಾರೇ ಇದ್ದರೂ ಸಹ ಇಷ್ಟೊಂದು ಸಹನೆಯಿಂದ ನಾನು ಕೇಳಿದ ಒಂದೊಂದು ಪ್ರಶ್ನೆಗಳಿಗೂ ಅನೇಕಾನೇಕ ದೃಷ್ಟಿಕೋನಗಳಲ್ಲಿ ಸರಾಗವಾಗಿ ಉತ್ತರಿಸುತ್ತಿದ್ದರೋ ಇಲ್ಲವೋ ತಿಳಿಯದು. ಅಷ್ಟು ಸೊಗಸಾಗಿ ಸಂದರ್ಶನ ನೀಡಿದ ಶ್ರೀ ಎಂ. ಕುಮಾರ್‌ರವರ ಮಾತುಗಳಲ್ಲೇ ಅವರ ವೃತ್ತಿ ಕ್ಷೇತ್ರದಲ್ಲಿ ಅವರಿಗಿರುವ ಕಾರ್ಯ ನೈಪುಣ್ಯತೆ ಹಾಗು ಅದ್ಭುತ ಅನುಭವ ಎದ್ದು ಕಾಣುತ್ತಿತ್ತು. ಇನ್ನೂ ಸ್ವಲ್ಪ ಸಮಯ ಅವರೊಟ್ಟಿಗೆ ಕುಳಿತು ಸಾಫ್ಟ್‌ವೇರ್ ಕ್ಷೇತ್ರವನ್ನು ಇನ್ನಷ್ಟು ಕೆದಕುವ ಹಂಬಲವಿದ್ದರೂ ಸಮಯ ಅದಕ್ಕೆ ಸ್ಪಂದಿಸಲಿಲ್ಲ. ಬರೊಬ್ಬರಿ ಎರಡು-ಮೂರು ತಾಸುಗಳ ಸುಧೀರ್ಘ ಸಂದರ್ಶನದಲ್ಲಿ ನಾನು ಅವರಿಂದ ತಿಳಿದುಕೊಂಡದ್ದು ಮಾತ್ರ ಅಪಾರ ಮತ್ತು ಅಲ್ಲಿ ನಾನು ತಿಳಿದುಕೊಂಡ ಕೆಲ ಮುಖ್ಯ ಹಾಗೂ ಯುವಕರಿಗೆ ತಿಳಿಸಲೇ ಬೇಕಾದ ಕೆಲ ವಿವರಗಳನ್ನು ಈ ಮೂಲಕ ವ್ಯಕ್ತಪಡಿಸುವ ಪುಟ್ಟ ಪ್ರಯತ್ನವೇ "ಐಟಿ ಎಂಬ ಬಣ್ಣದ ಲೋಕ"

ಸಾಮಾನ್ಯವಾಗಿ ಬಣ್ಣದಲೋಕ ಎಂದ ಕೂಡಲೆ ನಮಗೆ ಥಟ್ಟನೆ ನೆನಪಾಗುವುದು ಸಿನಿಮಾ ಜಗತ್ತು! ಆದರೆ, ಐಟಿ ಕ್ಷೇತ್ರವನ್ನು ಸಹ ಬಣ್ಣದ ಲೋಕ ಎಂದು ತಿಳಿಸಿ, ಅದ-ಕ್ಕೆ ಸೂಕ್ತ ವಿವರಣೆಗಳನ್ನು ಸಹ ನೀಡಿದ ಕುಮಾರ್‌ರವರ ಬಗ್ಗೆ ಮತ್ತು ಇವರ ಸಾಫ್ಟ್‌ವೆಂಟ್ ಸರ್ವೀಸಸ್‌ನ ಬಗ್ಗೆ ಒಂದಿಷ್ಟು ತಿಳಿಸಿ ನಂತರ ಬಣ್ಣದ ಲೋಕದ ಕಡೆ ಪಯಣಿಸೋಣ.

## ಸಾಫ್ಟ್‌ವೆಂಟ್ ಸರ್ವೀಸಸ್ ಪ್ರೈ.ಲಿ

ಅಭಿವೃದ್ಧಿಯ ಪಥದಲ್ಲಿ ಶರವೇಗದಿಂದ ಬೆಳೆದಿರುವ ನಮ್ಮ ದೇಶದ ಕೈಗಾರಿಕೆಗಳು, ಉದ್ಯಮಗಳು ಮತ್ತು ಅನೇಕಾನೇಕ ಕಂಪನಿಗಳು ಇಂದು ತಮ್ಮ ತಮ್ಮ ಕ್ಷೇತ್ರಗಳಲ್ಲಿ ತಮ್ಮದೇ ಆದ ಪ್ರಾಬಲ್ಯವನ್ನು ಸಾಧಿಸಿವೆ. ಪ್ರಾಬಲ್ಯ ಎಂದರೇ ತನ್ನ ಕ್ಷೇತ್ರದ ಉಳಿದೆಲ್ಲಾ ಉದ್ಯಮ ಅಥವಾ ಉದ್ಯಮಿಗಳಿಗಿಂತ ಹೆಚ್ಚು ಉನ್ನತಿಯನ್ನು ಸಾಧಿಸುವುದು ಎಂದರ್ಥ. ಇಂತಹ ಪ್ರಬಲ ಕಂಪನಿಗಳು ತಮ್ಮ ವ್ಯಾಪಾರ ವಹಿವಾಟುಗಳನ್ನು ಅತ್ಯಂತ ಪಾರದರ್ಶಕವಾಗಿ ಹಾಗೂ ಪ್ರಾಮಾಣಿಕವಾಗಿ ನಡೆಸಿಕೊಂಡು ಹೋಗುವುದರ ಜೊತೆಗೆ ತನ್ನ ಕೋಟ್ಯಾಂತರ ರೂಪಾಯಿಗಳ ಉತ್ಪನ್ನಗಳು ಎಲ್ಲಿಯೂ ಸೋರಿಕೆಯಾಗದಂತೆ ನಿಗಾವಹಿಸುವುದು ಮತ್ತು ಅದಕ್ಕೆ ತಕ್ಕಂತೆ ಸೂಕ್ತ ಲೆಕ್ಕಾಚಾರವನ್ನು ಇಡುವುದು ಮತ್ತು ಕಂಪನಿಯ ಆಯವ್ಯಯಗಳನ್ನು ಪ್ರತಿನಿತ್ಯದಂತೆ ಸೂಕ್ತವಾಗಿ ನಿರ್ವಹಿಸುವುದು ಅತ್ಯಗತ್ಯ. ಇಲ್ಲವಾದರೇ, "ಮಾತು ಮನೆ ಕೆಡೆಸಿತ್ತು, ತೂತು ಓಲೆ ಕೆಡಿಸಿತ್ತು" ಎಂಬಂತೆ ಕಂಪನಿಯ ಉತ್ಪನ್ನಗಳಲ್ಲಿ ಮತ್ತು ಆಯವ್ಯವಗಳಲ್ಲಿ ಸೋರಿಕೆಯಾದಲ್ಲಿ ಕ್ರಮೇಣ ಕಂಪನಿಯ ವಹಿವಾಟಿನಲ್ಲಿ ಏರುಪೇರಾಗಿ ಕಂಪನಿಯು ಅತಿಯಾದ ನಷ್ಟವನ್ನು ಅನುಭವಿಸಬೇಕಾಗುತ್ತದೆ. ಈ ರೀತಿಯಾದ ಸೂಕ್ತ ನಿಯಮಗಳು ಅಥವಾ ಸೂತ್ರಗಳನ್ನು ಪಾಲಿಸದೇ ಮುಚ್ಚಿಹೋದ ಅನೇಕ. ಕಂಪನಿಗಳನ್ನು ನೀವೆಲ್ಲರೂ ನೋಡಿಯೇ ಇರುತ್ತೀರಿ.

ಒಂದು ಉದಾಹರಣೆಯೊಂದಿಗೆ ಇದನ್ನು ತಿಳಿಯೋಣ: ಒಂದು ಬಿಸ್ಕತ್ತು ತಯಾರು ಮಾಡುವ ಘಟಕವನ್ನು ತೆಗೆದುಕೊಳ್ಳೋಣ, ಅಲ್ಲಿ ಪ್ರತಿನಿತ್ಯ ತಯಾರಾಗುವ ಬಿಸ್ಕತ್ತುಗಳು ಎಷ್ಟು? ಮತ್ತು ಇಡೀ ವಿಶ್ವಕ್ಕೆ ಅದನ್ನು ಪೂರೈಸುವ ಮಾರುಕಟ್ಟೆ ಇರುವುದರಿಂದ ತಯಾರಾದ ಬಿಸ್ಕತ್ತಗಳು ಮತ್ತು ದೇಶ-ವಿದೇಶಗಳಿಗೆ ಸರಬರಾಜುಗೊಂಡ ಪ್ರತಿಯೊಂದು ಬಿಸ್ಕತ್ತುಗಳ ದಾಸ್ತಾನುಗಳನ್ನು ಅತಿ ಜಾಗರೂಕತೆಯಿಂದ ನಿರ್ವಹಿಸಬೇಕಾಗುತ್ತದೆ. ಇಲ್ಲವಾದಲ್ಲಿ ಕಾರ್ಖಾನೆಯಲ್ಲಿ ತಯಾರಾಗುತ್ತಿರುವ ಬಿಸ್ಕತ್ತುಗಳೆಷ್ಟು? ಗೋದಾಮಿನಲ್ಲಿರುವುದೆಷ್ಟು? ಮಾರುಕಟ್ಟೆಗೆ ನೀಡಿದ ಸರಬರಾಜು ಎಷ್ಟು? ಮತ್ತು ಯಾವ ಯಾವ ಬಿಸ್ಕತ್ತುಗಳನ್ನು ಅದರ ತಯಾರಿಕೆಯ ದಿನಾಂಗಳಿಗನುಗುಣವಾಗಿ ಮಾರುಕಟ್ಟೆಗೆ ಪೂರೈಸಬೇಕು? ಹೀಗೆ ಪೂರೈಸಿದ ದಾಸ್ತಾನುಗಳಿಂದ ಕಂಪನಿಗೆ ಬರಬೇಕಾದ ಹಣದ ಬಾಬ್ತು ಎಷ್ಟು? ಹೀಗೆ ಒಂದರ ಮೇಲೊಂದರಂತೆ ಗೊಂದಲಗಳು ಸೃಷ್ಟಿಯಾಗಿ ಕಂಪನಿಯನ್ನು ನಡೆಸುವುದೇ ದುಸ್ತರವಾಗಿ ಬಿಡುತ್ತದೆ. ಹೀಗೆ ಈ ರೀತಿಯ ಕಂಪನಿಗಳ ದಾಸ್ತಾನುಗಳ ನಿರ್ವಹಣೆಯನ್ನು ಮತ್ತು ಈ ಕ್ಷೇತ್ರದಲ್ಲಿ ಉದ್ಯಮಿಗಳು ಅನುಭವಿಸುತ್ತಿರುವ ಸಮಸ್ಯೆಗಳನ್ನು ಮನಗಂಡು ಇದಕ್ಕೆಲ್ಲಾ ಪರಿಹಾರ ನೀಡುವ ಉದ್ದೇಶದಿಂದ ಬೆಂಗಳೂರಿನಲ್ಲಿ ಸಣ್ಣ ಮಟ್ಟದಲ್ಲಿ ಪ್ರಾರಂಭಗೊಂಡ ಸಂಸ್ಥೆಯೇ ಸಾಫ್ಟ್‌ವೆಂಟ್ ಟೆಕ್ನಾಲಜೀಸ್, ಶ್ರೀ ಎಂ. ಕುಮಾರ್‌ರವರ ಕನಸಿನ ಕೂಸು. ನಂತರದ ದಿನಗಳಲ್ಲಿ ಹಂತ-ಹಂತವಾಗಿ ಬೆಳೆದ ಸಾಫ್ಟ್‌ವೆಂಟ್ ಟೆಕ್ನಾಲಜೀಸ್ ಕಂಪನಿಯನ್ನು ತಮ್ಮ ವ್ಯವಹಾರದ ಪರಿಮಿತಿಯನ್ನು ಚೆನ್ನಾಗಿ ಅರಿತು ಮತ್ತು ಇದನ್ನು ದೇಶದ ಅತ್ಯುತ್ತಮ ಸಂಸ್ಥೆಯನ್ನಾಗಿಸುವ ದೂರದೃಷ್ಟಿಯಿಂದ ಸಾಫ್ಟ್‌ವೆಂಟ್ ಟೆಕ್ನಾಲಜೀಸ್‌ಅನು. ಸಾಫ್ಟ್‌ವೆಂಟ್ ಸರ್ವೀಸಸ್ ಪ್ರೈ.ಲಿ. ಎಂದು ಮರುನಾಮಕರಣಗೊಳಿಸಿ, ತನ್ನ ಖಾಸಗಿ ಮಾಲಿಕತ್ವದ ಸಂಸ್ಥೆಯನ್ನು ಖಾಸಗಿ ಕಂಪನಿಯನ್ನಾಗಿಸಿ, ಸಮಾನ ಮನಸ್ಸಿನ ಮತ್ತಿರ್ವರು ನಿರ್ದೇಶಕರನ್ನು ಜೊತೆಗೆ ಕರೆದುಕೊಂಡು, ಇಂದು ಹತ್ತಾರು ನೌಕರರಿಗೆ ನೌಕರಿಯನ್ನು ನೀಡುವುದರ ಜೊತೆಗೆ ತಾವು ಕಂಡ ಕನಸಿನ ಹಾದಿಯಲ್ಲಿ ತಮ್ಮ ನಿಸ್ವಾರ್ಥ ಕೆಲಸದಿಂದ ಮತ್ತು ಸಾಧಿಸಲೇ ಬೇಕೆನ್ನುವ ಛಲದಿಂದ ಯಶಸ್ವಿಯಾಗಿ ಮನ್ನಡೆಯುತ್ತಿದ್ದಾರೆ ಸಾಫ್ಟ್‌ವೆಂಟ್ ಸರ್ವೀಸಸ್ ಪ್ರೈ.ಲಿ.ನ ಶ್ರೀ ಎಂ.ಕುಮಾರ್.

## ನಿಮ್ಮ ಯಾವುದೇ ಸ್ವರೂಪದ ವ್ಯಾಪಾರ-ವ್ಯವಹಾರದ ಬಂಧು:

ನಿಮ್ಮ ವ್ಯವಹಾರದ ಸ್ವರೂಪ ಏನೇ ಆಗಿರಲೀ! ಅದು ಸರ್ವೀಸ್ ಓರಿಯೆಂಟೆಡ್ ಆಗಿರಲೀ, ಉತ್ಪಾದನಾ ಕ್ಷೇತ್ರವಾಗಿರಲೀ, ಮಾರಾಟವಾಗಿರಲೀ ಹೀಗೇ ಯಾವುದೇ ತರಹದ ನಿಮ್ಮ ವ್ಯವಹಾರಗಳ ಅಗತ್ಯ ನಿರ್ವಹಣೆಗೆ ಸಾಫ್ಟ್‌ವೆಂಟ್ ಸರ್ವೀಸಸ್



# About Softvent and Directors

